**ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 743/2024**

**ಸಾಕ್ಷಿಃ ಸಿಡಬ್ಲ್ಯೂಃ 11 , ಪಿ.ಡಬ್ಲ್ಯೂಃ 7**

| | |
|---|---|
| ಸಾಕ್ಷಿದಾರರ ಹೆಸರು | : ಯಲ್ಲಪ್ಪ ಮಾಧರ |
| ತಂದೆಯ ಹೆಸರು | : ಹನುಮಂತಪ್ಪ ಮಾಧರ |
| ವಯಸ್ಸು | : 60 ವರ್ಷ |
| ಉದ್ಯೋಗ | : ಪೊಲೀಸ್ ಉಪ ನಿರೀಕ್ಷಕರು , ಬೆಳ್ತಂಗಡಿ ಪೊಲೀಸ ಠಾಣೆ |
| ವಾಸ್ತವ್ಯ | : ಬೆಳ್ತಂಗಡಿ , ದ.ಕ. |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 25/04/2025**

(**ಸಾಕ್ಷಿಯು ವಿಸಿ ಮೂಲಕ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ.**)

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ದಿಃ 23.07.2021 ರಿಂದ 2024 ಮೇ ಯವರೆಗೆ ಪೊಲೀಸ್ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 16.12.2023 ರಂದು ನಾನು ಕರ್ತವ್ಯದಲ್ಲಿ ಇದ್ದಾಗ ಚಾಸಾ – ಇವರು ನೀಡಿದ ಗಣಕೀಕೃತ ದೂರನ್ನು ಭಟ್ಕಳ ನಗರ ಠಾಣೆ ಗುನ್ಹಾ ನಂಬರ್ 154/2023 ನೇದರಲ್ಲಿ ದಾಖಲಿಸಿಕೊಂಡಿರುತ್ತೇನೆ. ನಂತರ ಪ್ರ ವ ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಚಾಸಾ 1 ರವರು 3 ಆಕಳು ಮತ್ತು 1 ಹೋರಿ, 4 ಹಗ್ಗ , ಇವುಗಳ ಕಿಮ್ಮತ್ತು ಅಂದಾಜು ರೂ. 20,000 ಕಿಮ್ಮತ್ತು ಇರಬಹುದು ಹಾಗೂ ಆರೋಪಿಯನ್ನು ಪಂಚನಾಮೆಯೊಂದಿಗೆ ಸ್ವೀಕರಿಸಿ ಅದೇ ದಿನ ಪಿ ಎಫ್ ನಂಬರ್ 98/2023 ನೇದರಲ್ಲಿ ನ್ಯಾಯಾಲಯಕ್ಕೆ ಹಾಗೂ ಎಸಿ ಭಟ್ಕಳ ಇವರಿಗೆ ಪತ್ರದ ಮೂಲಕ ಜಾನುವಾರುಗಳನ್ನು ಗೋಶಾಲೆಗೆ ಬಿಡಲು ಆದೇಶವಾಗಲು ನಿವೇದಿಸಿರುತ್ತೇನೆ. ಅದೇ ದಿನ ಪಶುವೈಧ್ಯಾಧಿಕಾರಿ , ಭಟ್ಕಳ ಇವರಿಗೆ ಸದರಿ ಜಾನುವಾರುಗಳ ವೈಧ್ಯಕೀಯ ಪ್ರಮಾಣಪತ್ರ ಕೊಡಲು ನಿವೇದಿಸಿದ್ದು ಬರುತ್ತದೆ. ಅದೇ ದಿನ ಆರೋಪಿಯನ್ನು 11.00 ಗಂಟೆಗೆ ಸ್ಥಳದಲ್ಲಿ ವಶಕ್ಕೆ ಪಡೆದು 2.30 ಗಂಟೆಗೆ ಠಾಣೆಯಲ್ಲಿ ದಸ್ತಗಿರಿ ನಿಯಮ ಪಾಲಿಸಿ ನ್ಯಾಯಾಲಯಕ್ಕೆ ಆತನ ವೈಧ್ಯಕೀಯ ಪರೀಕ್ಷೆ ಮಾಡಿ ಹಾಜರುಪಡಿಸಿರುತ್ತೇನೆ. ಅದೇ ದಿನ 3 ಆಕಳು, 1 ಹೋರಿಯನ್ನು ಎಸಿ ಯವರ ಅನುಮತಿಯಂತೆ ಮೂರ್ಡೇಶ್ವರದ ಬೈಲೂರಿನ ಗೋ ಶಾಲೆಗೆ ಕಳುಹಿಸಿದ್ದು ಇರುತ್ತದೆ. ಅದೇ ದಿನ ನಮ್ಮ ಸಿಬ್ಬಂದಿಯವರಾದ ಚಾಸಾ 6,8 9 ರವರ ಹೇಳಿಕೆ ಪಡೆದಿರುತ್ತೇನೆ. ದಿಃ 18.12.2023 ರಂದು ಆರೋಪಿತನು ನ್ಯಾಯಾಲಯಕ್ಕೆ ಜಾಮೀನು ಅರ್ಜಿ ಸಲ್ಲಿಸಿದ ಬಗ್ಗೆ ತಕರಾರು ಅರ್ಜಿ ನೀಡಿರುತ್ತೇನೆ.

ದಿಃ 27.12.2023 ರಂದು ಬೈಲೂರಿನ ಗೋಶಾಲೆಯಲ್ಲಿ ಇಟ್ಟಿದ್ದ 3 ಆಕಳುಗಳಲ್ಲಿ 1 ಆಕಳು ಮೃತವಾದ ಬಗ್ಗೆ ಮಾಹಿತಿ ನೀಡಿದಂತೆ ಪಶುವೈದ್ಯಾಧಿಕಾರಿಗಳ ಜೊತೆಗೆ ಸ್ಥಳಕ್ಕೆ ಹೋಗಿ 2 ಜನ ಪಂಚರಾದ ಚಾಸಾ 4 ಮತ್ತು 5 ರವರನ್ನು ಪಂಚರಾಗಲು ಒಪ್ಪಿಸಿ ಅದರಂತೆ ಅವರ ಸಮಕ್ಷಮ ಆಕಳು ಮೃತಪಟ್ಟಿದ್ದನ್ನು ಖಚಿತಪಡಿಸಿಕೊಂಡು ಪಂಚನಾಮೆಯನ್ನು ಬೆಳಿಗ್ಗೆ 11.30 ರಿಂದ 12.30 ರವರೆಗೆ ಜರುಗಿಸಿರುತ್ತೇವೆ. ನಂತರ ಸದರಿ ಸ್ಥಳದಲ್ಲಿ ಆಕಳನ್ನು ಶವಪರೀಕ್ಷೆ ಮಾಡಿ ನಂತರ ಧಫನ್ ಮಾಡಲಾಯಿತು. ದಿಃ 16.01.2024 ರಂದು ಪಶುವೈದ್ಯಾಧಿಕಾರಿ ,ಬಟ್ಕಳ ಇವರಿಂದ ಜಾನುವಾರುಗಳ ವೈದ್ಯಕೀಯ ಪ್ರಮಾಣಪತ್ರ ಹಾಗೂ ಶವ ಪರೀಕ್ಷೆಯ ಪ್ರಮಾಣಪತ್ರವನ್ನು ಪಡೆದಿರುತ್ತೇನೆ. ದಿಃ 29.01.2024 ರಂದು ಸದರಿ ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

3. ಸಾಕ್ಷಿಯು ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿದಿರುತ್ತಾರೆ. ಸಾಕ್ಷಿಯು ನಿಪಿ-4 ಬಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಪ್ರ ವ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ- 6 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 6 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-2 ಬಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಪೊಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ-5 ಬಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ವೈಧ್ಯಾಧಿಕಾರಿಗಳಿಗೆ ನೀಡಿದ ಕೋರಿಕೆ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಎಂದು , ಸಾಕ್ಷಿಯ ಸಹಿಯನ್ನು ನಿಪಿ-7 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ವೈಧ್ಯಾಧಿಕಾರಿಗಳ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ- 8 ಎಂದು , ಸಾಕ್ಷಿಯ ಸಹಿಯನ್ನು ನಿಪಿ-8 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಎಸಿ ಯವರಿಗೆ ನೀಡಿದ ಕೋರಿಕೆ ನೋಡಿ ಗುರುತಿಸಿದ್ದು ಅದನ್ನು ನಿಪಿ-9 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 9 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಗೋಶಾಲೆ ಅಧ್ಯಕ್ಷರಿಗೆ ನೀಡಿದ ಮನವಿ ನೋಡಿ ಗುರುತಿಸಿದ್ದು ಅದನ್ನು ನಿಪಿ- 10 ಎಂದು , ಸಾಕ್ಷಿಯ ಸಹಿಯನ್ನು ನಿಪಿ-10 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಗೋಶಾಲೆ ಅಧ್ಯಕ್ಷರಿಗೆ ನೀಡಿದ ಇನ್ನೊಂದು ಮನವಿ ನೋಡಿ ಗುರುತಿಸಿದ್ದು ಅದನ್ನು ನಿಪಿ- 11 ಎಂದು , ಸಾಕ್ಷಿಯ ಸಹಿಯನ್ನು ನಿಪಿ-11 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಗೋಶಾಲೆ ಅಧ್ಯಕ್ಷರು ನೀಡಿದ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ- 12 ಎಂದು , ಸಾಕ್ಷಿಯ ಸಹಿಯನ್ನು ನಿಪಿ-12 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮುದ್ದೆಮಾಲುಗಳನ್ನು ವಿಸಿ ಮೂಲಕ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎ ಆರ್ ಎಸ್ ವಕೀಲರಿಂದ,**

ದಿಃ 16.12.2023 ರಂದು ಜಾನುವಾರುಗಳನ್ನು ಪರೀಕ್ಷೆ ಮಾಡಲು ವೈಧ್ಯಾಧಿಕಾರಿಗಳನ್ನು ಕರೆಯಿಸಿದ್ದೇವೆ. ವೈಧ್ಯಾಧಿಕಾರಿಗಳು ಎಲ್ಲಿ ಮತ್ತು ಯಾವ ಸಮಯಕ್ಕೆ ಜಾನುವಾರುಗಳ ಪರೀಕ್ಷೆ

ಮಾಡಿದ್ದಾರೆ ಎಂದು ನಮ್ಮ ದಾಖಲೆಯಲ್ಲಿ ನಮೂದು ಇಲ್ಲ. ಪಂಚನಾಮೆಗೆ ಉಪಯೋಗಿಸಿದ ಪ್ರಿಂಟರ್ ಯಾವುದೆಂದು ನನಗೆ ಗೊತ್ತಿಲ್ಲ. ಜಾನುವಾರುಗಳನ್ನು ಯಾರ ಆದೇಶದ ಮೇರೆಗೆ ವಿಲೇವಾರಿ ಮಾಡಲಾಗಿದೆ ಎಂಬ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಇರುವುದಿಲ್ಲ. ಗುನ್ಹಾ ಸ್ಥಳದಲ್ಲಿ ತಯಾರಿಸಿದ ಪಂಚನಾಮೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅದನ್ನು ಇಂದು ನ್ಯಾಯಾಲಯದಲ್ಲಿ ನಾನು ನೋಡಿರುತ್ತೇನೆ. ಯಾವೆಲ್ಲಾ ದಾಖಲೆಗಳನ್ನು ನ್ಯಾಯಾಲಯದಲ್ಲಿ ಗುರುತಿಸಲಾಗಿದೆ ಎಂಬ ಬ ಗ್ಗೆ ನನಗೆ ಮಾಹಿತಿ ಇದೆ. ಸ್ಥಳದಲ್ಲಿ ಪಂಚನಾಮೆ ಮಾಡಿದ್ದೇವೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಪಂಚನಾಮೆಗೆ ಸಂಬಂಧಿಸಿದ ಯಾವುದೇ ಮೂಲ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೇ ಹಾಜರುಪಡಿಸಿರುತ್ತೇನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗೋಪಾಲಕೃಷ್ಣ ಗೋಶಾಲೆಯಲ್ಲಿ 1 ಆಕಳು ಮೃತಪಟ್ಟಿರುತ್ತದೆ. ಜಾನುವಾರುಗಳನ್ನು ಜಪ್ತು ಮಾಡಿದಾಗ ವೈಧ್ಯಾಧಿಕಾರಿಗಳು ಜಾನುವಾರುಗಳು ಸುಸ್ಥಿತಿಯಲ್ಲಿವೆ ಎಂದು ವರದಿ ನೀಡಿರುತ್ತಾರೆ. ಗೋಶಾಲೆಯ ನಿರ್ಲಕ್ಷತನದಿಂದ 1 ಆಕಳು ಮೃತ ಪಟ್ಟಿದೆ ಎಂದರೆ ಸರಿಯಲ್ಲ. 1 ಆಕಳು ಯಾವ ಕಾರಣದಿಂದ ಮೃತಪಟ್ಟಿದೆ ಎಂದು ವೈಧ್ಯಾಧಿಕಾರಿಗಳಿಂದ ವರದಿಯನ್ನು ಪಡೆದಿರುತ್ತೇವೆ. ಗುನ್ಹಾ ಸ್ಥಳ ಹಾಗೂ ಗುನ್ಹಾ ಸ್ಥಳದಲ್ಲಿ ಇರುವ ಮನೆಯು ಯಾರಿಗೆ ಸೇರಿದ್ದು ಎಂಬ ಬಗ್ಗೆ ದಾಖಲೆಗಳನ್ನು ನಾವು ಹಾಜರುಪಡಿಸಿಲ್ಲ. ನಾನು ಗುನ್ಹಾ ಸ್ಥಳ ಪರಿಶೀಲನೆ ಮಾಡಿರುತ್ತೇನೆ. ಗುನ್ಹಾ ಸ್ಥಳದಲ್ಲಿರುವ ಮನೆಗೆ ಗೇಟು ಇರುವ ಬಗ್ಗೆ ನಾನು ನೋಡಿದ್ದು ಇರುವುದಿಲ್ಲ. ಗುನ್ಹಾ ಸ್ಥಳದಲ್ಲಿರುವ ಮನೆಯ ಮುಂದೆ ಯಾವುದೇ ಹೆಸರು ಬರೆದ ಬಗ್ಗೆ ನಾವು ಗಮನಿಸಿಲ್ಲ. ಸದರಿ ಪ್ರಕರಣವನ್ನು ನಮ್ಮ ಠಾಣೆಯ ಸಿಬ್ಬಂದಿಗಳೇ ದಾಖಲಿಸಿದ್ದಾರೆ ಎಂದರೆ ಸರಿ. ಸದರಿ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರು ನಮ್ಮ ಸಿಬ್ಬಂದಿಗಳೇ ಆಗಿದ್ದಾರೆ ಎಂದರೆ ಸರಿ. ಗುನ್ಹಾ ಸ್ಥಳದ ಅಕ್ಕಪಕ್ಕದ ಮನೆಯವರನ್ನು ಸಾಕ್ಷಿದಾರರಾಗಿ ಮಾಡಲು ಪ್ರಯತ್ನ ಮಾಡಿಲ್ಲ ಕಾರಣ ಅಕ್ಕಪಕ್ಕದಲ್ಲಿ ಯಾವುದೇ ಮನೆಗಳು ಇರುವ ಬಗ್ಗೆ ನಾವು ಗಮನಿಸಿಲ್ಲ .ಆದರೆ ಅದು ಜನವಸತಿ ಇರುವ ಪ್ರದೇಶ ಆಗಿದೆ. ಪಂಚಸಾಕ್ಷಿದಾರರನ್ನು ಚಾಸಾ −1 ಇವರು ಕರೆಯಿಸಿರುತ್ತಾರೆ. ಪಂಚರಿಗೆ ನೊಟೀಸನ್ನು ನೀಡಿದ ಬಗ್ಗೆ ನನ್ನ ಗಮನಕ್ಕೆ ಬಂದಿದೆ. ಅಂತಹ ಯಾವುದೇ ನೊಟೀಸು ಕಡತದಲ್ಲಿ ಇಲ್ಲ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ತಪ್ಪು ಮಾಡಿಲ್ಲದಿದ್ದರೂ ಪಿರ್ಯಾದಿದಾರರು ನಮ್ಮ ಠಾಣೆಯ ಸಿಬ್ಬಂದಿಯಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಭಟ್ಕಳದಲ್ಲಿರುವ ಜಾನುವಾರುಗಳಿಗೆ ಗುರುತಿನ ಚೀಟಿಯನ್ನು ಅಂಟಿಸಲಾಗಿದೆ. ಸಾಮಾನ್ಯವಾಗಿ ಯಾವುದೇ ಖಾಸಗಿ ವ್ಯಕ್ತಿಗಳು ಜಾನುವಾರುಗಳನ್ನು ಸಾಕುವಾಗ ಗುರುತಿನ ಚೀಟಿ ಅಂಟಿಸಬೇಕು ಎಂಬ ಬಗ್ಗೆ ಕಾನೂನು ಇದೆ ಎಂಬ ಬಗ್ಗೆ ನನಗೆ ಮಾಹಿತಿ ಇದೆ. ಗುರುತಿನ ಚೀಟಿ ಅಂಟಿಸದೇ ಇದ್ದರೆ ಯಾವ

ಕಾನೂನಿನಡಿಯಲ್ಲ್ಲಿ ಅಪರಾಧ ಆಗುತ್ತದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಪ್ರಕರಣ ದಾಖಲಿಸುವ ಮೊದಲು ಯಾವುದೇ ಜಾನುವಾರುಗಳು ಕಳುವಾದ ಬಗ್ಗೆ ಠಾಣೆಗೆ ಯಾವುದೇ ದೂರು ಬಂದಿರುವುದಿಲ್ಲ. ಆರೋಪಿಯ ವಿರುದ್ಧ ಯಾವುದೇ ಸಾಕ್ಷಾಧಾರಗಳು ಇಲ್ಲದಿದ್ದರೂ ಸಹ ಆತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಕಾನೂನಿನ ಅರಿವು ಇಲ್ಲದಿದ್ದರೂ ಸಹ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಪ್ರಕರಣದಲ್ಲಿರುವ ಮುದ್ದೆ ಮಾಲಿಗೂ ಆರೋಪಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ಸಾಕ್ಷಿಯ ಹೇಳಿಕೆಯನ್ನು ಸಾಕ್ಷಿಗೆ ವಿಸಿ ಮುಖಾಂತರ ಓದಿ ಹೇಳಿ ಸರಿ ಇದೆ ಎಂದು ಹೇಳಿದ ನಂತರ ಪ್ರತಿಯನ್ನು ತೆಗೆಯಲಾಗಿರುತ್ತದೆ. ಸಾಕ್ಷಿಯು ವಿಸಿ ಮುಖಾಂತರ ಹಾಜರಿದ್ದ ಕಾರಣ ಸದ್ರಿಯವರ ಸಹಿಯನ್ನು ಪಡೆದುಕೊಂಡಿರುವುದಿಲ್ಲ).**

(**ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು** )

**ಓ.ಹೇ.ಕೇ. ಸರಿ ಇದೆ .**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ.**